<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>

ಓ ಎಸ್ ನಂ. **444/2016** ಪಿ .ಡಬ್ಲ್ಯೂ: **1**

<u>ದಿನಾಂಕಃ **31.01.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ. ಹೆಚ್.ಎನ್.ಡಿ ವಕೀಲರಿಂದಃ</u>

ಈ ದಾವೆಯಲ್ಲಿನ ಕಚ್ಚಾ ನಕ್ಷೆಯನ್ನು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿ ನಾನೇ ಬರೆಯಿಸಿರುತ್ತೇನೆ. ಸದರಿ ನಕ್ಷೆಯಲ್ಲಿರುವಂತೆ ದಾವಾ ಸ್ವತ್ತು ಮತ್ತು ಅದರ ಸುತ್ತಮುತ್ತಲಿನ ಆಸ್ತಿಗಳು ಇರುತ್ತವೆಂದು ಗ್ರಾಮ ನಕಾಶೆ ಅಟ್ಲಾಸ್ ಮತ್ತಿತರ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಮತ್ತು ದಾವಾ ಸ್ವತ್ತಿನ ಸ್ಥಿತಿ ಕಚ್ಚಾ ನಕ್ಷೆಯಲ್ಲಿರುವಂತೇ ಇರುವುದಿಲ್ಲ ಎಂದರೆ ಸರಿಯಲ್ಲ . ಸದರಿ ದಾರಿಗೆ ಸಂಬಂಧಿಸಿದಂತೆ ಇರುವ ವ್ಯಾಜ್ಯವನ್ನು ಇತ್ಯರ್ಥಪಡಿಸಲು ತಹಶೀಲ್ದಾರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ತಹಶೀಲ್ದಾರರವರು ಸದರಿ ಪ್ರಕರಣವನ್ನು ಇತ್ಯರ್ಥಪಡಿಸಲು ನ್ಯಾಯಾಲಯಕ್ಕೆ ಹೋಗಬೇಕೆಂದು ಹಿಂಬರಹವನ್ನು ನೀಡಿರುತ್ತಾರೆ.

2. ದೊಣ್ಣೇರೆ ಗ್ರಾಮದ ಸರ್ವೆ ನಂ.60 ಮೂಲತಃ ಅಡವೀಶಯ್ಯ ಎನ್ನುವವರಿಗೆ ಸೇರಿದ್ದು ಎಂದರೆ ಸರಿ . ಅದರ ವಿಸ್ತೀರ್ಣ 1 ಎಕರೆ 16 ಗುಂಟೆ ಎಂದರೆ ಸರಿ . ನಾನು ದಿನಾಂಕಃ 05.11.1998 ರಲ್ಲಿ ಅಡವೀಶಯ್ಯ ರವರಿಂದ ಸರ್ವೆ ನಂ.60 ರಲ್ಲಿ 1 ಎಕರೆ ಖರೀದಿ ಮಾಡಿರುತ್ತೇನೆ ಎಂದರೆ ಸರಿ . ಸದರಿ 1 ಎಕರೆಯ ಚಕ್ಕುಬಂದಿ ಪೂರ್ವಕ್ಕೆ ಕೆಂಚನಹಳ್ಳಿ ಗಢಿ, ಪಶ್ಚಿಮಕ್ಕೆ ಅಡವೀಶಯ್ಯರವರಿಗೆ ಸೇರಿದ ಉಳಿಕೆ ಜಮೀನು, ಉತ್ತರಕ್ಕೆ ಶಿವಣ್ಣನವರ

ಜಮೀನು ಮತ್ತು ದಕ್ಷಿಣಕ್ಕೆ ಶಾಂತರಾಜು ರವರ ಜಮೀನು ಎಂದರೆ ಸರಿ . ನಂತರ ದಿನಾಂಕಃ 27.10.2005 ರಲ್ಲಿ ಸರ್ವೆ ನಂ.60 ರಲ್ಲಿ ಉಳಿದ 16 ಗುಂಟೆ ಜಮೀನನ್ನು ಸಹ ಅಡವೀಶಯ್ಯರವರಿಂದ ನಾನೇ ಖರೀದಿಸಿರುತ್ತೇನೆ ಎಂದರೆ ಸರಿ . ಸದರಿ 16 ಗುಂಟೆಗೆ ಚಕ್ಕು ಬಂದಿ ಪೂರ್ವಕ್ಕೆ ನನಗೆ ಸೇರಿದ 1 ಎಕರೆ ಜಮೀನು, ಪಶ್ಚಿಮಕ್ಕೆ ಪಟೇಲ ಈರೇಗೌಡರವರ ಜಮೀನು, ಉತ್ತರಕ್ಕೆ 1 ನೇ ಪ್ರತಿವಾದಿಯ ಜಮೀನು ಮತ್ತು ದಕ್ಷಿಣಕ್ಕೆ ಶಾಂತರಾಜು ರವರ ಜಮೀನು ಎಂದರೆ ಸರಿ . ಸದರಿ ಜಮೀನಿನ ಸ್ವಾಧೀನದಲ್ಲಿ ನಾನೇ ಇದ್ದು ಅದನ್ನು ಅನುಭವಿಸುತ್ತಿದ್ದೇನೆ ಎಂದರೆ ಸರಿ . ಸದರಿ ಜಮೀನಿನ ದಕ್ಷಿಣಕ್ಕೆ ಇರುವ ರೈಲ್ವೆ ಹಳಿಯ ಪಕ್ಕದಲ್ಲಿರುವ ಸರ್ಕಾರಿ ಜಾಗದಿಂದ ಶಾಂತರಾಜುರವರ ಜಮೀನಿನ ಮೂಲಕ ನನ್ನ ಜಮೀನಿನಗೆ ಓಡಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ರೈಲ್ವೆ ಹಳಿ ಪಕ್ಕದಲ್ಲಿರುವ ಸರ್ಕಾರಿ ಜಾಗದಿಂದ ಶಾಂತರಾಜು ರವರ ಜಮೀನಿನೊಳಗೆ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಸದರಿ ಜಮೀನನ್ನು ಖರೀದಿ ಮಾಡಿದಾಗಿನಿಂದ ಶಾಂತರಾಜುರವರ ಜಮೀನಲ್ಲಿರುವ ರಸ್ತೆಯಲ್ಲಿ ಓಡಾಡುತ್ತಿದ್ದೇವೆ ಮತ್ತು ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

3. ಪ್ರತಿವಾದಿಗಳಿಗೆ ಸರ್ವೆ ನಂ.59/1 ರಲ್ಲಿ 1 ಎಕರೆ 32 1/2 ಗುಂಟೆ ಜಮೀನಿ ಇರುತ್ತದೆ ಎಂದರೆ ಸರಿ . ಪ್ರತಿವಾದಿಗಳಿಗೆ ಸರ್ವೆ ನಂ. 60/2 ರಲ್ಲಿ 37 1/2 ಗುಂಟೆ ಜಮೀನು ಇರುತ್ತದ ಎಂದರೆ ಸರಿ . ಸದರಿ ಎರಡು ಸರ್ವೆ ನಂ. ಜಮೀನುಗಳು ಒಂದರ ಪಕ್ಕ ಒಂದು ಇರುತ್ತವೆ ಎಂದರೆ ಸರಿ . ಸದರಿ ಎರಡು ಸರ್ವೆ ನಂ. ಜಮೀನುಗಳ ಮಧ್ಯದಲ್ಲಿ ಉತ್ತರ - ದಕ್ಷಿಣ ದಿಕ್ಕಿನಲ್ಲಿ ಒಂದು ಬಂಡಿದಾರಿ ಇರುತ್ತದೆ. ಸದರಿ ದಾರಿ ರೈಲ್ವೆ ಹಳಿಯಿಂದ ಅರಣ್ಯ ಪ್ರದೇಶದ ವರೆಗೂ ಇರುತ್ತದೆ. ಸದರಿ ರಸ್ತೆಯನ್ನು ಹೊರತುಪಡಿಸಿ ರಸ್ತೆಯ ಎರಡು ಭಾಗದಲ್ಲಿರುವ ತಮ್ಮ ಜಮೀನುಗಳಿಗೆ ಪ್ರತಿವಾದಿಗಳು ತಂತಿ ಬೇಲಿಯನ್ನು ಅಳವಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಜಮೀನಿನಲ್ಲಿ ಮಾವಿನ ಮರಗಳನ್ನು ಬೆಳೆಸಿರುತ್ತಾರೆ ಎಂದರೆ ಸರಿ . ಸದರಿ ಜಮೀನುಗಳಲ್ಲಿ

ಪ್ರತಿವಾದಿಗಳು ಎರಡು ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಪ್ರತಿವಾದಿಗಳು ಸುಮಾರು 30-40 ವರ್ಷಗಳಿಂದ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.59 ಮತ್ತು 60 ಅನ್ನು 1 ನೇ ಪ್ರತಿವಾದಿಯ ತಂದೆ ಅವರ ಹೆಸರಿಗೆ ಮತ್ತು ಅಡವೀಶಯ್ಯ ರವರ ಹೆಸರಿಗೆ ವಿಲ್ ಮಾಡಿರುತ್ತಾರೆ ಎಂದರೆ ಸರಿ .

4. ಸರ್ವೆ ನಂ.59 ರಲ್ಲಿ ನಮ್ಮ ಹೆಸರಿಗೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿ . ನಾವು ರೆವಿನ್ಯೂ ಅಧಿಕಾರಿಗಳ ಜೊತೆ ಸೇರಿಕೊಂಡು ಸರ್ವೆ ನಂ.59/2 ರಲ್ಲಿ 37 1/2 ಗುಂಟೆ ಮತ್ತು ಸರ್ವೆ ನಂ.60/3 ರಲ್ಲಿ 18 1/2 ಗುಂಟೆ ನಮ್ಮ ಹೆಸರಿಗೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ದಿನಾಂಕಃ 14.07.2016 ರಂದು ಗುಬ್ಬಿ ಪೊಲೀಸ್ ಠಾಣೆಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಪ್ರಾಧಿಕಾರಿಕ್ಕೆ ನನ್ನ ಹೆಂಡತಿ ವಾದಿಯ ಕಡೆಯಿಂದ ಪ್ರತಿವಾದಿಗಳ ಮೇಲೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ . ಸದರಿ ಅರ್ಜಿ/ದೂರಿನಲ್ಲಿರುವ ವಿಚಾರಗಳು ನನಗೆ ತಿಳಿದಿದ್ದು ಅದನ್ನು ನಾನು ಮತ್ತು ವಾದಿ ಸೇರಿ ಕೊಟ್ಟಿರುತ್ತೇವೆ. ಸದರಿ ದೂರಿನಲ್ಲಿ ನಾವು ನಮ್ಮ ಜಮೀನಿಗೆ ಓಡಾಡಲು ನಮಗೆ ಯಾವುದೇ ದಾರಿ ಇರುವುದಿಲ್ಲ ನಮಗೆ ದಾರಿಯನ್ನು ಬಿಡಿಸಿಕೊಡಿ ಎಂದು ನಮೂದಿಸಿರುತ್ತೇವೆ ಎಂದರೆ ಸರಿ . ಸದರಿ ದೂರನ್ನು ಸಲ್ಲಿಸಿದ ನಂತರ ಡಿಸೆಂಬರ್ 2016 ರಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ಸದರಿ ಬಂಡಿದಾಯಿಂದ ಸರ್ವೆ ನಂ.59/1 ರ ಮೂಖಾಂತರ ನಮ್ಮ ಜಮೀನಿಗೆ ಹೋಗಲು ದಾರಿ ಇರುತ್ತದೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ನಾನು ನನ್ನ ವಾದ ಪ್ರತದ ಕಚ್ಚಾ ನಕ್ಷೆಯಲ್ಲಿ ತೋರಿಸಿರುವಂತೆ ಸರ್ವೆ ನಂ.59/1 ರಲ್ಲಿ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಕ್ಷೆಯಲ್ಲಿ ಹೇಳಿರುವಂತೆ ಇರುವ ದಾರಿ

ಕಾಲ್ಪನಿಕವಾದುದು ಎಂದರೆ ಸರಿಯಲ್ಲ. ಸರ್ವೆ ನಂ.59/1 ರ ಪೂರ್ವಕ್ಕೆ ನಮ್ಮ ಮಾಲೀಕತ್ವದ ಸರ್ವೆ ನಂ.59/2 ರ ಜಮೀನು ಇರುವುದಿಲ್ಲ ಆದ್ದರಿಂದ ಸದರಿ ದಾರಿಯನ್ನು ಉಪಯೋಗಿಸುವ ಅವಶ್ಯಕತೆ ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ.

***(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)***

**(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)**

ಒ . ಹೇ. ಕೇ. ಸರಿ. ಇದೆ

ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ , ಗುಬ್ಬಿ.

Dw.1 is present and is further cross examined by L/c for plaintiffs. For further defendant evidence.

Call on. 21.08.2023.

**ACJ and JMFC., Gubbi**